Buildings near the Dam Site At Almatti

244. Sri K. P. NADGOUDA (Mudhol).—

Will the Minister for Public Works be pleased to state :—

(*a*) the expenditure incurred by the Government on construction of residential quarters and public offices near the dam site at Almatti in Upper Krishna Project;

(*b*) whether the bulidings constructed so far are useful for the purpose for which they were built ?

A.—Sri VEERENDRA PATIL (Minister for Public Works).—

(*a*) Rs. 25,59,000.

(*b*) Yes.

ಶ್ರೀ ಕೆ. ಪಿ. ನಾಡಗೌಡ.—ನಾರಾಯಣಪುರದಲ್ಲಿ ಮೊದಲು ಅಣೆಕಟ್ಟು ಕಟ್ಟುತ್ತಿರೋ ಅಥವಾ ಆಲಮಟ್ಟಿಯಲ್ಲಿ ಮೊದಲು ಅಣೆಕಟ್ಟನ್ನು ಕಟ್ಟಿಸುತ್ತಿರೋ ?

† ಶ್ರೀ ವೀರೇಂದ್ರ ಪಾಟೀಲ್.—ಎರಡು ಕಡೆಯೂ ರಿಜರ್‌ವಾಯರ್ ಬರುತ್ತದೆ.

ಶ್ರೀ ಕೆ. ಪಿ. ನಾಡಗೌಡ.—ನಾರಾಯಣಪುರದಲ್ಲಿ ಮೊದಲು ರಿಜರ್‌ವಾಯರ್‌ನ್ನು ನಿರ್ಮಾಣ ಮಾಡಿದರೆ, ಬ್ಯಾಕ್ ವಾಟರ್‌ನಿಂದ ಆಲಮಟ್ಟಿಯಲ್ಲಿ ರಿಜರ್‌ವಾಯರ್ ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲವಾದ್ದರಿಂದ ಈಗ ಆಲಮಟ್ಟಿಯಲ್ಲಿರುವ ಅಣೆಕಟ್ಟು ನಿವೇಶನದ ಬಳಿ ಕಟ್ಟಿಸಿರುವ ಕಟ್ಟಡಗಳು ನಿರುಪಯುಕ್ತವಾಗುತ್ತದೆಂದು ಜನರು ಹೇಳುತ್ತಿರುವುದು ನಿಜವೆ ?

ಶ್ರೀ ವೀರೇಂದ್ರ ಪಾಟೀಲ್.—ಸಬ್‌ಮರ್ಜ್ ಆಗುವಂತೆ ಕಟ್ಟಿಲ್ಲ. ಮಾನ್ಯ ಸದಸ್ಯರಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ನಾರಾಯಣಪುರದ ಬಳಿ ಮತ್ತು ಆಲಮಟ್ಟಿಯ ಬಳಿ ಒಂದೊಂದು ರಿಜರ್‌ವಾಯರ್ ಕಟ್ಟಬೇಕೆಂದಿದ್ದೇವೆ. ಆಲಮಟ್ಟಿಯಲ್ಲಿ ಕಟ್ಟುವ ಅಣೆಕಟ್ಟನ್ನು ಬ್ಯಾಕ್ ವಾಟರ್ ನಿಂದ ಮುಳುಗಡೆಯಾಗುವುದಕ್ಕಿಂತ ಮೇಲಿನ ಪ್ರದೇಶದಲ್ಲಿ ಕಟ್ಟಬೇಕೆಂದಿದ್ದೇವೆ.

Sri RAJA PID NAIK.—May I know the number of quarters constructed at Almatti and the officers to whom they are alloted ?

Sri VEERENDRA PATIL.—These quarters are constructed both at Almatti and Narayanapur. Most of the quarters are for residential purposes and some quarters are for non-residential purposes. At Almatti, bulidings for Executive Engineers, Junior Engineers, Supervisors and Superintending Engineer's Office Building and Executive Engineer's Office buliding are also constructed.

ಶ್ರೀ ಕೆ. ಪಿ. ನಾಡಗೌಡ.—ಇಷ್ಟೊಂದು ವ್ಯಯ ಮಾಡುವುದಕ್ಕಿಂತ ಅವರು ಗುಡಿಸಲನಲ್ಲಿ ಇರಲಿಕ್ಕೆ ಏಕೆ ಆದೇಶ ಮಾಡಬಾರದಿತ್ತು ?

ಶ್ರೀ ವೀರೇಂದ್ರ ಪಾಟೀಲ್.—ಅಲ್ಲಿಯ ಕೆಲಸ ಮುಗಿದಮೇಲೆ ಆ ಕಟ್ಟಡಗಳು ಏನೂ ವ್ಯರ್ಥವಾಗುವುದಿಲ್ಲ. ಅವು ಶಾಶ್ವತವಾಗಿ ಇರಬೇಕಾಗುತ್ತದೆ. ಕೆಲವು ಕಾಲ ಗುಡಿಸಲುಗಳಲ್ಲಿ ಇರು ಎಂದು ಹೇಳಬಹುದು. ಆದರೆ ರಿಟೈರ್ ಆಗುವವರೆಗೂ ಇರಬೇಕೆಂದು ಹೇಳಲಾಗುವುದಿಲ್ಲ. ಕೆಲವು ಕಟ್ಟಡಗಳು ಕಚ್ಚಾ ಆಗಿ ಮಾಡಿರುತ್ತೇವೆ.

ಶ್ರೀ ಸಿದ್ದಯ್ಯ ಕಾತಿಮಠ.—ಇಲ್ಲಿ ಕೊಟ್ಟಿರತಕ್ಕ ಕಟ್ಟಡಗಳು ಆಫೀಸರ್ಸಿಗೆ ಮಾತ್ರವೊ, ಅಥವಾ ಕೂಲಿಗಾರರಿಗೂ ಇದೆಯೋ ?

ಶ್ರೀ ವೀರೇಂದ್ರ ಪಾಟೀಲ್.—ಕೂಲಿಗಾರರಿಗೆ ಕೊಡುವ ಜವಾಬ್ದಾರಿ ನಮಗೆ ಬರುವುದಿಲ್ಲ. ಇನ್ನೂ ಟೆಂಡರ್ ಓಪ್ಪಿ ಯಾರಿಗೂ ಕೊಟ್ಟಿಲ್ಲ. ಕಂಟ್ರಾಕ್ಟರ್ಸ್ ಬಂದಮೇಲೆ ಅವರೇ, ಕೂಲಿಗಾರರನ್ನು ಕರಕೊಂಡು ಬರುತ್ತಾರೆ. ಲೇಬರ್ ರಾಸ್ ಪ್ರಕಾರ ಏನೇನು ಅನುಕೂಲತೆಗಳನ್ನು ಅವರಿಗೆ ಕೊಡಬೇಕಾಗುತ್ತದೆ, ಅದನ್ನು ಕೊಡಬೇಕು. ಇಲ್ಲಿ ಮಾತು ಬಂದಿರುವುದು ಸಬ್ಬಂದಿಯ ಸಲುವಾಗಿ.

Sri C. K. RAJAIAH SHETTY.—In Damoder Valley, the upper dam is taken up first and then the lower dam. Why is the lower dam proposed first here and then the higher dam, Sir ?

Sri VEERENDRA PATIL.—The lower dam is the place where diversion will take place, and we will store water. Because this is a very big project, this is supposed to be the biggest project in Mysore State. Therefore we are thinking of having two reservoirs one at upper reaches at Almatti and another at Narayanapur. Actually water comes into diversion from the lower dam.

Sri H. N. NANJEGOWDA.—I want to know whether the Government is keen on taking up this project and completing it and if so, how do the Government justify the retrenchment of the 200 Junior Engineers at Almatti ?

Sri VEERENDRA PATIL.—I do not think that retrenchment has been made by the Department. Probably the local officers had appointed some people on daily wages or as local candidates. As soon as the work was over, they were asked to go out. That is all. No retrenchment is made.

ಶ್ರೀ ಬಾಪುಗೌಡ.—1967-68 ರಲ್ಲಿ ನಾರಾಯಣಪುರ, ಆಲಮಟ್ಟಿಗೆ ಎಷ್ಟು ಖರ್ಚುಮಾಡಿದ್ದೀರಿ ಮತ್ತು ಕೇವಲ ಮುಂದಿನ ವರ್ಷ 50 ಲಕ್ಷ ಇಟ್ಟಿದ್ದೀರಿ. ಈ 50 ಲಕ್ಷದಲ್ಲಿ ಅದರ ಕಾರ್ಯ ಪ್ರಾರಂಭ ಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ನನ್ನ ಮುಂದೆ ಅಂಕಿ ಸಂಖ್ಯೆಗಳು ಇಲ್ಲ. ನನಗೆ ಗೊತ್ತಿದ್ದಂತೆ 67—68ರಲ್ಲಿ ಹೆಚ್ಚು ಕೆಲಸ ಮಾಡುವುದಕ್ಕಾಗಲಿಲ್ಲ. ಬೇಕಾಗಿರತಕ್ಕಂತಹ ಡಿಸೈನ್ಸ್, ಎಸ್ಟಿಮೇಟ್ ಟೆಂಡರ್ ಶೆಡ್ಯೂಲ್ ಇದಕ್ಕೋಸ್ಕರವಾಗಿ ಸಂಪೂರ್ಣ ಕಾಲ ಹೋಯಿತು. ಮುಂದಿನ ವರ್ಷ ತ್ವರಿತವಾಗಿ ಮಾಡಬೇಕೆಂದು ಇದೆ. ಬಹುಶಃ 50 ಲಕ್ಷ ರೂಪಾಯಿ ಸಾಲದು, ಹೆಚ್ಚು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

Allocation of Foodgrains.

245. Sri T. V. KRISHNAPPA (Channapatna).—

Will the Minister for Food and Civil Supplies be pleased to state :—

(*a*) whether any distinction exists between a District and a District in regard to allocation of quotas of foodgrains;

(*b*) the allotments made to Bangalore District in 1966-67 and 1967-68;

(*c*) the reason for reducation in the quota in 1967-68 ?